



## ಚಟುವಟಿಕೆ 9: ನಿಜವಾದ ಹೂವು ಅಥವಾ ಸಸ್ಯವನ್ನು ಚಿತ್ರಿಸುವುದು

**ವಯಸ್ಸು:** 6 ವರ್ಷ ಮೇಲ್ಪಟ್ಟವರು

**ವಸ್ತುಗಳು:** ನಿಮ್ಮ ಮನೆಯ ಹತ್ತಿರದಲ್ಲಿರುವ ನಿಜವಾದ ಹೂವುಗಳು ಮತ್ತು ಸಸ್ಯಗಳು.

### ನೆನಪಿನಲ್ಲಿಡಬೇಕಾದ ಅಂಶಗಳು:

1. ನಿಮ್ಮೊಂದಿಗೆ ಕೆಲಸ ಮಾಡಲು ಕುಟುಂಬದ ಸದಸ್ಯರು ಅಥವಾ ಸ್ನೇಹಿತರನ್ನು ಹುಡುಕಿ.
2. ಅವರಿಗೂ ಸಹ ಅದೇ ಚಟುವಟಿಕೆಯನ್ನು ಪ್ರತ್ಯೇಕವಾಗಿ ಮಾಡಲು ಹೇಳಿ.
3. ನಿಮ್ಮ ಮನೆಯ ಸುತ್ತ ಮುತ್ತಲೂ ಯಾವುದಾದರೂ ಹೂವುಗಳು, ಮತ್ತು ಸಸ್ಯಗಳಿದ್ದರೆ ನೀವು ಅವುಗಳನ್ನು ಸೂಕ್ಷ್ಮವಾಗಿ ಗಮನಿಸಿ ಚಿತ್ರಿಸಿ.
4. ಒಂದು ಹೂವನ್ನು ಅಥವಾ ಸಸ್ಯವನ್ನು ತೆಗೆದುಕೊಂಡು ಕೆಲವು ನಿಮಿಷಗಳವರೆಗೆ ಅದರಲ್ಲಿರುವ ಗೆರೆಗಳು ಮತ್ತು ಆಕಾರಗಳು ಹಾಗೂ ಅದರಲ್ಲಿರುವ ವಿವರಗಳನ್ನು (ಡಿಟೇಲ್ಸ್) ಸೂಕ್ಷ್ಮವಾಗಿ ಗಮನಿಸಿ.
5. ಹೂವನ್ನು ಅಥವಾ ಸಸ್ಯವನ್ನು ಸೂಕ್ಷ್ಮವಾಗಿ ಗಮನಿಸಿದ ನಂತರ, ಹೂವಿನ ಅಥವಾ ಸಸ್ಯದ ದೊಡ್ಡದಾದ ಭಾಗದಿಂದ ಚಿತ್ರಿಸಲು ಪ್ರಾರಂಭಿಸಿ.

6. ಪ್ರತಿ ಹಂತದಲ್ಲೂ ಹೂವಿನ ಅಥವಾ ಸಸ್ಯದ ಚಿತ್ರವನ್ನು ಗಮನಿಸಿ ನೆನಪಿನಲ್ಲಿಟ್ಟುಕೊಂಡು ಚಿತ್ರಿಸಿ.

## ನಿಮ್ಮ ಪಾಲುದಾರರೊಂದಿಗೆ ಪರಿಗಣಿಸಬೇಕಾದ ಅಂಶಗಳು

1. ನಿಮ್ಮಿಬ್ಬರ ಚಿತ್ರವು ಮುಗಿದ ನಂತರ, ಚಿತ್ರವನ್ನು ಪರಸ್ಪರ ಹಂಚಿಕೊಳ್ಳಿ.
2. ನೀವು ಯಾವುದಾದರೂ ವಿವರಗಳನ್ನು(ಡಿಟೇಲ್ಸ್) ಸೇರಿಸಲು ಬಯಸಿದರೆ ಪರಸ್ಪರವಾಗಿ ಧನಾತ್ಮಕವಾಗಿ ಹಂಚಿಕೊಂಡು ನಿಮ್ಮ ಚಿತ್ರವನ್ನು ಪೂರ್ಣಗೊಳಿಸಬಹುದು.

ARTSPARKS CURIOSITY. CREATIVITY. LEARNING.

*ArtSparks Foundation*

*www.art-sparks.org*